ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 2, September-October, 2024, Pp. 14-25
©*IIMRD*, Mysuru

IIMRD JOURNALS
www.iimrd.com

# ಕೊಡಗು ಜಿಲ್ಲೆಯ ನಿಡ್ತ ಗ್ರಾಮದಲ್ಲಿ ಬಳಸುವ ಕೃಷಿಯ ಉಪಕರಣಗಳು

**ದಿನೇಶ ಎನ್. ಎನ್**
ಸಂಶೋಧನಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

**ಸಾರಾಂಶ: (Abstract)**

*ನಿಡ್ತ ಗ್ರಾಮವು ಕರ್ನಾಟಕದ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನಲ್ಲಿದೆ. ಕೃಷಿಯು ಸಮಯ ತೆಗೆದುಕೊಳ್ಳುವ ಮತ್ತು ಶ್ರಮದಾಯಕ ಪ್ರಕ್ರಿಯೆಯಾಗಿದ್ದು ಅದನ್ನು ಕೈಯಿಂದ ಮಾಡಲಾಗುವುದಿಲ್ಲ. ಪರಿಣಾಮವಾಗಿ, ಕೃಷಿ ಪ್ರಕ್ರಿಯೆಗಳನ್ನು ಕೈಗೊಳ್ಳಲು ಉಪಕರಣಗಳು ಮತ್ತು ಯಂತ್ರಗಳು ಅಗತ್ಯವಿದೆ. ವ್ಯವಸಾಯ ಎಂದು ಕರೆಸಿಕೊಳ್ಳುವಾಗಲೇ ನಮ್ಮ ಕಣ್ಮುಂದೆ ಬರುವಂತಹ ಉಪಕರಣವೇ ನೇಗಿಲಾಗಿದೆ. ಕೃಷಿ ಚಟುವಟಿಕೆಗಳಿಗೆ ಬಳಸುವ ಸಾಧನ ಸಲಕರಣೆಗಳಿಗೆ ಸಂಬಂಧಿಸಿದ ರೀತಿ ನೀತಿಯೇ ಉಪಕರಣಗಳ ಸಂಸ್ಕೃತಿ, ವ್ಯವಸಾಯದ ಸಾಧನಗಳನ್ನು ಅವುಗಳನ್ನು ತಯಾರಿಸುವ ವಸ್ತುಗಳ ಆಧಾರದ ಮೇಲೆ ವಿಂಗಡಿಸಲಾಗಿದೆ. ಪ್ರಾಚೀನ ಕಾಲದಿಂದಲೂ ಮರದ ಅನೇಕ ವಸ್ತುಗಳನ್ನು ಗೃಹೋಪಯೋಗಿ ಉಪಕರಣಗಳಾಗಿ ಬಳಸುತ್ತಿರುವುದನ್ನು ಕಾಣುತ್ತೇವೆ. ಇತಿಹಾಸಪೂರ್ವ ಕಾಲದಿಂದಲೂ ಮಾನವ ಕಲ್ಲಿನ ಉಪಕರಣಗಳನ್ನು ಬಳಸಿಕೊಂಡು ಬರುತ್ತಿರುವುದನ್ನು ಕಾಣಬಹುದು. ಆಧುನಿಕ ಯಂತ್ರಗಳನ್ನು ಬಳಕೆ ಮಾಡಿಕೊಳ್ಳುವುದರಿಂದ ಕೃಷಿಯ ಪಾರಂಪರಿಕತೆಯನ್ನು ಹಾಳು ಮಾಡಿವೆ. ಕೊಡಗು ಜಿಲ್ಲೆಯ ನಿಡ್ತ ಗ್ರಾಮದಲ್ಲಿ ಉಪಯೋಗಿಸುವ ಕೃಷಿ ಉಪಕರಣಗಳನ್ನು ತಿಳಿದುಕೊಳ್ಳುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.*

**ಮುಖ್ಯಪದಗಳು (Keywords):** ಕೃಷಿ ಸಂಬಂಧಿಸಿದ ಕಬ್ಬಿಣದ ಉಪಕರಣಗಳು, ಮರದ ಉಪಕರಣಗಳು, ಕಲ್ಲಿನ ಉಪಕರಣಗಳು, ಬಿದಿರಿನ ಉಪಕರಣಗಳು

## ಪೀಠಿಕೆ

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನಲ್ಲಿರುವ ನಿಡ್ತ ಗ್ರಾಮ (Nidtha) ಒಂದು ಸುಂದರ, ಆಕರ್ಷಕ ಗ್ರಾಮವಾಗಿದೆ. ಈ ಗ್ರಾಮವು ತಾಲೂಕು ಕೇಂದ್ರದಿಂದ 20ಕಿ.ಮೀ ದೂರದಲ್ಲಿದೆ ಮತ್ತು ಜಿಲ್ಲಾ ಕೇಂದ್ರ ಮಡಿಕೇರಿಯಿಂದ 60ಕಿ.ಮೀ ದೂರದಲ್ಲಿದೆ. ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ 230.59 ಹೆಕ್ಟೇರ್. ನಿಡ್ತದಲ್ಲಿ ಒಟ್ಟು 512 ಜನರನ್ನು ಹೊಂದಿದೆ, ಅದರಲ್ಲಿ ಪುರುಷ ಜನಸಂಖ್ಯೆ 251 ಮತ್ತು ಮಹಿಳಾ ಜನಸಂಖ್ಯೆ 261. ನಿಡ್ತ ಗ್ರಾಮದ ಸಾಕ್ಷರತೆ ಪ್ರಮಾಣವು 77.93% ಆಗಿದ್ದು ಅದರಲ್ಲಿ 82.87% ಪುರುಷರು ಮತ್ತು 73.18% ಮಹಿಳೆಯರು ಸಾಕ್ಷರರಾಗಿದ್ದಾರೆ. ನಿಡ್ತ ಗ್ರಾಮದಲ್ಲಿ ಸುಮಾರು 125 ಮನೆಗಳಿವೆ. 2011

*Please cite this article as:* ದಿನೇಶ ಎನ್.ಎನ್. (2024). ಕೊಡಗು ಜಿಲ್ಲೆಯ ನಿಡ್ತ ಗ್ರಾಮದಲ್ಲಿ ಬಳಸುವ ಕೃಷಿಯ ಉಪಕರಣಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(2). ಪು.ಸಂ.* 14–25

ಜನಗಣತಿಯ ಪ್ರಕಾರ ನಿಡ್ತ ಗ್ರಾಮದ ಮಕ್ಕಳ ಲಿಂಗ ಅನುಪಾತವು 909 ಆಗಿದೆ, ಇದು ಕರ್ನಾಟಕದ ಸರಾಸರಿ 948ಕ್ಕಿಂತ ಕಡಿಮೆಯಾಗಿದೆ. ನಿಡ್ತ ಗ್ರಾಮದ ಪಿನ್‌ಕೋಡ್ 571235 ಆಗಿದೆ. ಗ್ರಾಮವು ತನ್ನ ಸಾಂಸ್ಕೃತಿಕ ಸಂಪ್ರದಾಯ, ಕಾಫಿ ತೋಟಗಳು, ದಟ್ಟವಾದ ಅರಣ್ಯ ಹಾಗೂ ಮಳೆಗಾಲದಲ್ಲಿ ಆಕರ್ಷಕ ದೃಶ್ಯಗಳಿಗಾಗಿ ಅದ್ಭುತ ಪರಿಸರ ಸೌಂದರ್ಯವನ್ನು ಹೊಂದಿದೆ. ಈ ಹಳ್ಳಿಯ ಜನರು ಮುಖ್ಯವಾಗಿ ಕೃಷಿಯ ಮೇಲೆ ಅವಲಂಬಿತವಾಗಿದ್ದಾರೆ, ಈ ಹಳ್ಳಿಯ ಮುಖ್ಯ ಆರ್ಥಿಕ ಚಟುವಟಿಕೆ ಕೃಷಿಯಾಗಿದ್ದು, ಕಾಫಿ, ಕಾಳುಮೆಣಸು, ಹಾಗೂ ಇತರ ಮಸಾಲೆ ಬೆಳೆಗಳು ಪ್ರಮುಖವಾಗಿ ಬೆಳೆಯಲಾಗುತ್ತವೆ. ಹಸಿರುಮನೆಯಿಂದ ಆವರಿತ ಈ ಪ್ರದೇಶವು ಪ್ರಕೃತಿ ಪ್ರಿಯರು ಮತ್ತು ವೀಕ್ಷಕ ಪ್ರವಾಸಿಗರಿಗೆ ಮನಸೂರೆಗೊಳ್ಳುತ್ತದೆ. ಕೊಡಗು ಮರುಜೀವನದ (Coorg Renaissance) ಸಮಯದಲ್ಲಿ ಬ್ರಿಟಿಷ್ ಆಳ್ವಿಕೆ ಮತ್ತು ನಂತರದ ಕಾಲದಲ್ಲಿ ಏಕೀಕರಣದ ಸಮಯದಲ್ಲಿ ನಿಡ್ತ ಗ್ರಾಮದ ಆರ್ಥಿಕ ಮತ್ತು ಸಾಮಾಜಿಕ ಬದುಕಿನಲ್ಲಿ ಕೆಲವು ಪ್ರಮುಖ ಬದಲಾವಣೆಗಳು ಸಂಭವಿಸಿದವು. ಬ್ರಿಟಿಷರ ಕಾಲದಲ್ಲಿ ಕೊಡಗಿನ ಕಾಫಿ ತೋಟಗಳು ಅಭಿವೃದ್ಧಿ ಹೊಂದಿದಂತೆ, ನಿಡ್ತ ಹಳ್ಳಿಯು ಸಹ ಕೃಷಿ ಆಧಾರಿತ ಗ್ರಾಮವಾಗಿ ಬೆಳೆಯಿತು. ಈ ಹಳ್ಳಿಯ ಇತಿಹಾಸವನ್ನು ಆಳವಾಗಿ ಅಧ್ಯಯನ ಮಾಡುವಂತೆ ಹೆಚ್ಚಿನ ದಾಖಲೆಗಳು ಲಭ್ಯವಿಲ್ಲದ ಕಾರಣ, ಕೊಡಗಿನ ಸಾಮಾನ್ಯ ಇತಿಹಾಸವನ್ನು ಆಧರಿಸಿದ ಮಾಹಿತಿಯ ಮೂಲಕ ತಿಳಿದುಕೊಳ್ಳುವುದು ಅಗತ್ಯವಾಗಿದೆ.

ಕೃಷಿಯು ಸಮಯ ತೆಗೆದುಕೊಳ್ಳುವ ಮತ್ತು ಶ್ರಮದಾಯಕ ಪ್ರಕ್ರಿಯೆಯಾಗಿದ್ದು ಅದನ್ನು ಕೈಯಿಂದ ಮಾಡಲಾಗುವುದಿಲ್ಲ. ಪರಿಣಾಮವಾಗಿ, ಕೃಷಿ ಪ್ರಕ್ರಿಯೆಗಳನ್ನು ಕೈಗೊಳ್ಳಲು ಉಪಕರಣಗಳು ಮತ್ತು ಯಂತ್ರಗಳು ಅಗತ್ಯವಿದೆ. ವ್ಯವಸಾಯ ಎಂದು ಕರೆಸಿಕೊಳ್ಳುವಾಗಲೇ ನಮ್ಮ ಕಣ್ಮುಂದೆ ಬರುವಂತಹ ಉಪಕರಣವೇ ನೇಗಿಲಾಗಿದೆ. ವ್ಯವಸಾಯದ ಬೆಳವಣಿಗೆಯಲ್ಲಿ ಉಪಕರಣಗಳು ಇತಿಹಾಸವನ್ನು ದಿಟ್ಟಿಸಿದರೆ ನೇಗಿಲು ಇತ್ತೀಚಿನದು. ಈ ಕೃಷಿ ಉಪಕರಣಗಳನ್ನು ರೈತರಿಗೆ ವಿವಿಧ ಕಾರ್ಯಗಳಲ್ಲಿ ಸಹಾಯ ಮಾಡಲು ತಯಾರಿಸಲಾಗುತ್ತದೆ, ಅಂತಿಮವಾಗಿ ಕೃಷಿ ಪದ್ಧತಿಗಳಲ್ಲಿ ಉತ್ಪಾದನೆ, ದಕ್ಷತೆ ಮತ್ತು ಸಮರ್ಥನೀಯತೆಯನ್ನು ಹೆಚ್ಚಿಸುತ್ತದೆ. ಕೃಷಿ ಉಪಕರಣಗಳ ಹೆಸರು ಮತ್ತು ಉಪಯೋಗಗಳ ಬಗ್ಗೆ ಉತ್ತಮ ತಿಳುವಳಿಕೆಯನ್ನು ಪಡೆಯೋಣ. ಕೃಷಿ ಉಪಕರಣಗಳನ್ನು ಪ್ರಕ್ರಿಯೆಗಳನ್ನು ವೇಗಗೊಳಿಸಲು ಮತ್ತು ಸ್ವಯಂಚಾಲಿತಗೊಳಿಸಲು ತಯಾರಿಸಲಾಗುತ್ತದೆ, ಇಲ್ಲದಿದ್ದರೆ ಸಾಕಷ್ಟು ಸಮಯ ಮತ್ತು ಶ್ರಮ ಬೇಕಾಗುತ್ತದೆ. ರೈತರು ಉಪಕರಣಗಳು ಮತ್ತು ಯಂತ್ರೋಪಕರಣಗಳನ್ನು ಬಳಸಿಕೊಳ್ಳುವ ಮೂಲಕ ಹೆಚ್ಚು ವೇಗವಾಗಿ ಮತ್ತು ಕಡಿಮೆ ಶ್ರಮದಿಂದ ಕೆಲಸಗಳನ್ನು ಮಾಡಬಹುದು. ವ್ಯವಸಾಯ ಹೇಗೆ ಪ್ರಾಗಿತಿಹಾಸದ ಕಾಲಕ್ಕೆ ಸೇರುತ್ತದೆಯೋ ಹಾಗೇ ಉಳುಮೆಯ ಉಪಕರಣಗಳು ಸಹ ಪ್ರಾಗಿತಿಹಾಸದ ಕಾಲಕ್ಕೆ ಸೇರುತ್ತವೆ. ಪ್ರಾರಂಭದ ಹಂತದಲ್ಲಿ ಶಿಲಾಯುಗದ ಮಾನವ ಮೊದಲು ಬಳಸಿದ ಉಪಕರಣ 'ಗುಳಿದಸಿ ಅಥವಾ ಚೂಪಾದ ಕೋಲು'. ಇದು ಕಟ್ಟಿಗೆಯಿಂದ ಮಾಡಿದ ತುಂಡು. ಒಂದು ಕಡೆ ಚೂಪಾಗಿರುತ್ತಿತ್ತು, ಉದ್ದವಾಗಿರುತ್ತಿದ್ದ ಇದು ಕಂದ ಮೂಲಗಳನ್ನು ಅಗೆಯಲು ಮರದೊಳಗಿನ ಹಣ್ಣು ಹಂಪಲನ್ನು ಬೀಳಿಸಲು, ಒಣಗಿದ ರೆಂಬೆಗಳನ್ನು ಉರುವಲಿಗಾಗಿ ಕೆಡವಲು ಅನುಕೂಲವಾಗುತ್ತಿತ್ತು. ಈ ಆಯುಧವನ್ನು ಹೆಚ್ಚಾಗಿ ಸ್ತ್ರೀಯರು ಬಳಸುತ್ತಿದ್ದರು. ಕೃಷಿಯ ಉಪಕರಣದ ಆವಿಷ್ಕಾರವಾಗಿ ಗುದ್ದಲಿಯು ಮುಂಭಾಗದಲ್ಲಿ ಬಾಗಿದ ಉಪಕರಣ ಅಥವಾ ಬಾಗಿದ

ಮರದ ತುಂಡು, ಚೂಪಾದ ಕೋಲು ಅಗೆಯುವ ಸಾಧನಾವಾದರೆ ಇದು ಕಡಿಯುವಂಥದು ಮತ್ತು ಅದಕ್ಕಿಂತ ಪರಿಣಾಮಕಾರಿಯಾದುದು. ನೆಲವನ್ನು ಆಳಕ್ಕೆ ಅಗೆಯುವುದಷ್ಟೇ ಮಣ್ಣನ್ನು ತಿರುವಿ ಹಾಕಲು ಈ ಉಪಕರಣದಿಂದ ಸಾಧ್ಯವಾಯಿತು. ಈ ಆಯುಧವೇ ಅಗಲವಾದ ಗುದ್ದಲಿ. ಕೊಡಲಿಯಾಗಿ ಬೆಳವಣಿಗೆಯು ಆಯಿತು. ಚೂಪು ಕೋಲಾಗಲಿ, ಗುದ್ದಲಿಯಾಗಲೀ, ಉಳುಮೆಯ ಆಯುಧಗಳೂ ಆಗಿದ್ದವು. ಶಿಲಾಯುಗ ಅಥವಾ ನವ ಶಿಲಾಯುಗದವರೆಗೆ ಮರದ ನೇಗಿಲೇ ಬಳಕೆಯಲ್ಲಿದ್ದು ಅದು ಮನುಷ್ಯರೇ ಎಳೆದು ಉಳುಮೆ ಮಾಡುತ್ತಿದ್ದು, ಕಾಲ ನಂತರ ಪ್ರಾಣಿಗಳನ್ನು ಪಳಗಿಸುವುದನ್ನು ಕಲಿತ ಮೇಲೆ ಕುದುರೆ, ಎತ್ತು ಮುಂತಾದ ಪ್ರಾಣಿಗಳಿಂದ ಎಳೆಯುವಂತಾಯಿತು. ಕಾಲನಂತರದಲ್ಲಿ ಲೋಹವನ್ನು ಕಂಡುಕೊಂಡ ಮೇಲೆ ಕಬ್ಬಿಣದ ನೇಗಿಲನ್ನು ಉಳುಮೆಯ ಸಮರ್ಥ ಏಕೈಕ ಉಪಕರಣವಾಗಿ ಮುಂದುವರಿಯಿತು. ಕೃಷಿ ಚಟುವಟಿಕೆಗಳಿಗೆ ಬಳಸುವ ಸಾಧನ ಸಲಕರಣೆಗಳಿಗೆ ಸಂಬಂಧಿಸಿದ ರೀತಿ ನೀತಿಯೇ ಉಪಕರಣಗಳ ಸಂಸ್ಕೃತಿ, ವ್ಯವಸಾಯದ ಸಾಧನಗಳನ್ನು ಅವುಗಳನ್ನು ತಯಾರಿಸುವ ವಸ್ತುಗಳ ಆಧಾರದ ಮೇಲೆ ಈ ಕೆಳಗಿನಂತೆ ವಿಂಗಡಿಸಲಾಗುವುದು.

**ಕೃಷಿಗೆ ಸಂಬಂಧಿಸಿದ ಮರದ ಉಪಕರಣಗಳು:**

ಪ್ರಾಚೀನ ಕಾಲದಿಂದಲೂ ಮರದ ಅನೇಕ ವಸ್ತುಗಳನ್ನು ಕೃಷಿ ಹಾಗೂ ಗೃಹೋಪಯೋಗಿ ಉಪಕರಣಗಳಾಗಿ ಬಳಸುತ್ತಿರುವುದನ್ನು ಕಾಣುತ್ತೇವೆ.

***ನೇಗಿಲು***

ಸಾಮಾನ್ಯವಾಗಿ ನೇಗಿಲೆಂದರೆ ಮರದ ನೇಗಿಲೆಂದೇ ಕರೆಯುವಷ್ಟರ ಮಟ್ಟಿಗೆ ಅವುಗಳ ಬಳಕೆ ರೂಢಿಯಲ್ಲಿತ್ತು. ಆದರೆ ಇತ್ತೀಚೆಗೆ ಆ ಸ್ಥಾನವನ್ನು ಕಬ್ಬಿಣದ ನೇಗಿಲು ಆಕ್ರಮಿಸಿಕೊಂಡಿದೆ. ಮರದ ನೇಗಿಲಿನಲ್ಲಿ ಸಣ್ಣನೇಗಿಲು, ಮಧ್ಯಮ ಗಾತ್ರದ ನೇಗಿಲು, ಮಣ್ಣು ಮುಗುಚು ನೇಗಿಲುಗಳಿವೆ ಸಾಮಾನ್ಯವಾಗಿ ಒಂದು ಗಟ್ಟಿಯಾದ ಮರದ ತುಂಡಿನಿಂದ ಗ್ರಾಮದ ಬಡಗಿಯಿಂದ ನೇಗಿಲನ್ನು ಕೆತ್ತಿಸಲಾಗುತ್ತಿತ್ತು. ಕೆತ್ತಿದ ನೇಗಿಲನ್ನು ಕಬ್ಬಿಣದ ಜಿಗಣೆಯಿಂದ ಗುಳ ಸೇರಿಸಿ ಮೇಣೆ ಹಾಗೂ ನೇಗಿಲನ್ನು ಈಚಿನ (ಏಳೆಂಟು ಅಡಿ ಉದ್ದದ ಮರದ ತುಂಡು) ಸಹಾಯದಿಂದ ಕೂಡಿಸಲಾಗುತ್ತದೆ. ಎತ್ತುಗಳ ಸಹಾಯದಿಂದ ನೇಗಿಲನ್ನು ಉಳುಮೆ ಮಾಡಲಾಗುತ್ತದೆ. ಗುಳ ಮಾತ್ರ ಆಗಾಗ ಬದಲಾಯಿಸುತ್ತಿರಬೇಕು. ನೇಗಿಲು ಒಂದೆರಡು ವರ್ಷವರೆಗೆ ಬಳಕೆಗೆ



ಬರುತ್ತದೆ. ನೇಗಿಲನ್ನು ಧಾರ್ಮಿಕ ಭಾವನೆಯಿಂದಲೂ ಕೃತಜ್ಞತೆಯಿಂದಲೂ ಕಾಣುತ್ತಾರೆ. ಉಳುವಾಗ ನೇಗಿಲು ಮುರಿದರೆ ಕೇಡಾಗುತ್ತದೆಂಬ ನಂಬಿಕೆ ರೈತರಲ್ಲುಂಟು ಅನಂತರ ಕಬ್ಬಿಣದ ನೇಗಿಲುಗಳು

ಬಳಕೆಯಲ್ಲಿ ಬಂದ ಮೇಲೆ ಮರದ ನೆಗಿಲುಗಳ ಬಳಕೆ ವಿರಳವಾಗಿದೆ ಇತ್ತೀಚೆಗೆ ಟ್ರಾಕ್ಟರ್, ಟ್ರಿಲ್ಲರ್ ಮೊದಲಾದ ಉಪಕರಣಗಳು ಚಾಲ್ತಿಯಲ್ಲಿವೆ.[1]

***ನೊಗ***

ಉಳುಮೆ ಮಾಡಲು ನೇಗಿಲ ಜೊತೆ ಅವಶ್ಯಕವಾಗಿ ಬೇಕಾಗುವ ಸಲಕರಣೆಯೇ ನೊಗ. ಇದನ್ನು ಆರಡಿ ಉದ್ದದ ಅರ್ಧ ಅಡಿ ಅಗಲ ಗಾತ್ರದ ಮರದ ತುಂಡನ್ನು ನುಣುಪಾಗಿ ಮಧ್ಯದಲ್ಲಿ ಉಬ್ಬಿದಂತೆ ಕೆತ್ತಲಾಗುತಿತ್ತು. ನೊಗದಲ್ಲಿ ಎರಡು ವಿಧಗಳುಂಟು ಒಂದು ಉಳುಮೆ ಮಾಡಲು ಬಳಸುವ ನೊಗವಾದರೆ, ಮತ್ತೊಂದು ಎತ್ತಿನ ಗಾಡಿಯನ್ನು ಎಳೆಯಲು ಬಳಸುವ ನೊಗ ಇದನ್ನು 'ಗಾಡಿ ನೊಗ' ಎಂದೇ ಕರೆಯಲಾಗುತ್ತದೆ. ಇದು ಉಳುಮೆ ನೊಗಕ್ಕಿಂತಲೂ ದೊಡ್ಡ ಗಾತ್ರದಲ್ಲೂ ಹಾಗೂ ಗಟ್ಟಿಯಾಗಿಯೂ ಇರುತ್ತದೆ. ಇದರ ಎರಡು ಕಡೆಯು ಸಮ ಪ್ರಮಾಣದಲ್ಲಿ ರಂಧ್ರ ಕೊರೆದು ಅದರೊಳಗಿಂದ ಕಡಗೂಟದ ಜೋತಾ ಹಗ್ಗವನ್ನು ಎತ್ತಿನ ಕೊರಳಿಗೆ ಸುತ್ತಲಾಗುತ್ತದೆ. ಜನಪದರು ಮನುಷ್ಯನ ದಾಂಪತ್ಯ ಜೀವನ ಕೊಂಡಿಗಳಾದ ಗಂಡ ಹೆಂಡತಿಯನ್ನು ನೊಗಕ್ಕೆ ಕಟ್ಟಿದ ಎತ್ತುಗಳಿಗೆ ಸಮೀಕರಿಸಿ ಹೇಳುತ್ತಿದ್ದರು.



***ಕುಂಟೆ***

ಬಿತ್ತಿದ ಬೆಳೆಯ ನೆಲವನ್ನು ಹದ ಮಾಡಿ ಸಾಲುಗಳನ್ನು ಸರಿಪಡಿಸಿ ಅವುಗಳ ನಡುವೆ ಇರುವ ಕಳೆಯನ್ನು ನಾಶಗೊಳಿಸಲು ಕುಂಟೆಯನ್ನು ಬಳಸುವರು. ಕುಂಟೆಯಲ್ಲೂ ಎರಡು ವಿಧಗಳಿಗೆ ಒಂದು ಹೆಗ್ಗುಂಟೆ, ಮತ್ತೊಂದು ಕಿರುಗುಂಟೆ, ಹೆಗ್ಗುಂಟೆಯನ್ನು ಭೂಮಿಯನ್ನು ಸಡಿಲಗೊಳಿಸಲು ಹಾಗೂ ಸಮತಟ್ಟು ಮಾಡಲು ಬಳಸಿದರೆ, ಕಿರುಗುಂಟೆಯನ್ನು ಬೆಳೆಗಳ ನಡುವೆ ಬೆಳೆದಿರುವ ಕಳೆಯನ್ನು ನಾಶಗೊಳಿಸಲು ಬೆಳೆಗಳ ಬುಡಕ್ಕೆ ಮಣ್ಣನ್ನು ಹೇರಾಕಲು ಬಳಸಲಾಗುತ್ತಿತ್ತು.[2]

***ಎತ್ತಿನಗಾಡಿ***



ದವಸಧಾನ್ಯ, ಮತ್ತಿತರ ಸಾಮಾನು, ಸರಂಜಾಮುಗಳನ್ನು ಸಾಗಿಸಲು ಹಾಗೂ ಪ್ರಯಾಣ ಮಾಡಲು ಹಿಂದಿನಿಂದಲೂ ಎತ್ತಿನ ಗಾಡಿಯನ್ನು ಬಳಸಲಾಗುತ್ತಿತ್ತು. ಗಾಡಿಯಲ್ಲಿ ಜೋಡೆತ್ತಿನ ಗಾಡಿ, ಒಂಡೆತ್ತಿನಗಾಡಿ, ಕುದುರೆಗಾಡಿ, ಟೈರುಗಾಡಿಗಳೆಂಬ

---

1 ವಕ್ತೃ: ರವೀಶ. (2023, ಜೂನ್ 11). *ರೈತ.* ನಿಡ್ತ ಗ್ರಾಮ, ಸೋಮುವಾರಪೇಟೆ ತಾಲೂಕು, ಕೊಡಗು ಜಿಲ್ಲೆ,

2 ವಕ್ತೃ: ಪಾಪಣ್ಣ. (2023 ಜುಲೈ 11). *ರೈತ.* ನಿಡ್ತ ಗ್ರಾಮ, ಸೋಮುವಾರಪೇಟೆ ತಾಲೂಕು, ಕೊಡಗು ಜಿಲ್ಲೆ, ದಿನಾಂಕ: 11.07.2023.

ವಿಧಗಳಿವೆ. ಎತ್ತಿನಗಾಡಿ ತಯಾರಿಕೆಯಲ್ಲಿ ತುಂಡಿಗೆ ಪುಟ್ಟಿಮರದೆಂದೂ ಅದರ ಕಂಬಗಳಿವೆ ಅರಕಂಬವೆಂದೂ ಅವುಗಳನ್ನು ಸೇರಿಸುವ ಮರಕ್ಕೆ ಗುಂಬವೆಂತಲೂ ಕರೆಯುವರು. ಅರೆಮರದಿಂದ ತಯಾರಿಸಿದ ಚಕ್ರವನ್ನು ಪಟ್ಟಿ ಎಂಬ ಕಬ್ಬಿಣದ ಬಳೆಯನ್ನು ಚೆನ್ನಾಗಿ ಕಾಯಿಸಿ ಅದರೊಳಗೆ ಸೇರಿಸಿದರೆ ಗಾಡಿ ಚಕ್ರಗಳು ಸಿದ್ಧಗೊಂಡಂತೆ. ಈ ಎರಡು ಚಕ್ರಗಳನ್ನು ಧೂರಿಮರಯೊಳಗಿರುವ ಕಬ್ಬಣದ ಸರಗಳಿಗೆ ಸೇರಿಸಲಾಗುತ್ತದೆ. ಮೇಲ್ಭಾಗಕ್ಕೆ 'ಮೂಕ್ಕಿಮರ'ದ ಮೇಲೆ ಹಲಗೆಗಳನ್ನಿಟ್ಟು ಎರಡು ಕಡೆಗೂ ತಟಿಕೆಗಳನ್ನು ಕಟ್ಟಿ ಗಾಡಿಯನ್ನು ಸಿದ್ಧಗೊಳಿಸಿ, ಮೂರಿ ಮರಕ್ಕೆ ಅಡ್ಡಲಗಿ ನೊಗವನ್ನು ಸೇರಿಸಿದರೆ ಪ್ರಯಾಣಕ್ಕೆ ಸಿದ್ಧಗೊಳ್ಳುತ್ತದೆ.

***ಕಣಜ***

ದವಸಧಾನ್ಯ ಶೇಖರಣೆ ಮಾಡಲು ಮನೆಯ ಮೂಲೆಯಲ್ಲಿ ತಮ್ಮ ಬೆಳಗಳಿಗನುಗುಣವಾಗಿ ಕಣಜವನ್ನು ನಿರ್ಮಿಸಿಕೊಳ್ಳುತ್ತಿದ್ದರು. ಧಾನ್ಯ ಶೇಖರಣೆ ಮಾಡುವ ಮೊದಲು ಒಣಗಿದ ಭತ್ತದ ಹುಲ್ಲನ್ನು ಕಣಜದ ಕೆಳಭಾಗದಿಂದ ಒಳಗೋಡೆಗೆ ತಗುಲಿಸಿದಂತೆ ಹಾಸಿ ಅನಂತರ ಗೋಣಿಯ ಚೀಲಗಳನ್ನು ಅದರ ಮೇಲೆ ಹಾಸುವರು ಚೀಲದ ಮೇಲೆ ರಾಗಿ ಹೊಟ್ಟನ್ನು ಹರಡುವುದರಿಂದ ವಸ್ತ್ರಿಯಿಂದ ದಸವ ಕೆಡುವುದಿಲ್ಲ. ತದನಂತರ ಶುಚಿಮಾಡಿದ ರಾಗಿ, ಭತ್ತವನ್ನು ತುಂಬಿ ಪುನಃ ಖಾಲಿ ಚೀಲ, ಹುಲ್ಲು ಹಾಸಿ, ಅನಂತರ ಮಣ್ಣಿನಿಂದ ಮೆತ್ತಿ ಅದರ ಮೇಲೆ ಕಳ್ಳಿ, ಹೊಂಗೆ, ಬೇವಿನ ರೆಂಬೆಗಳನ್ನು ಸಿಕ್ಕಿಸುತ್ತಾರೆ. ಕ್ರಿಮಿಕೀಟಗಳನ್ನು ದೂರವಿಡುವ ಗುಣವನ್ನು ಈ ಸಸ್ಯಗಳು ಹೊಂದಿವೆ.[3]



***ಮಂಥನಕಡ್ಡಿ***

ಮಜ್ಜಿಗೆ ಕಡೆಯಲು ಬಳಸುವ ಸಾಧನ ಇದನ್ನು ಕಡೆಗೋಲು ಎಂದೂ ಕರೆಯುತ್ತಾರೆ. ಎರಡು ಮೂರು ಬೆರಳು ಗಾತ್ರದ ಬಿದಿರಿನ ಕಡ್ಡಿಯ ಒಂದು ಭಾಗವನ್ನು ನಾಲ್ಕು ಭಾಗವಾಗಿ ಸೀಳಿ ಅದನ್ನು ಮೂರು ಇಂಚು ಉದ್ದದ ಬಿದಿರು ಕಡ್ಡಿಯನ್ನು ಅಡ್ಡ ಹಾಗೂ ಉದ್ದವಾಗಿ ಬಿಗಿಯಾಗಿ ಸಿಕ್ಕಿಸಿ (ಧನ ಚಿಹ್ನೆ ಆಕಾರ)ಲಾಗುತ್ತದೆ. ಕಡ್ಡಿಯ ನಡುಭಾಗಕ್ಕೆ ಸೆಣಬು ಅಥವಾ ವೈರಿನ ದಾರ ಕಟ್ಟಿ ಮಜ್ಜಿಗೆ ಕಡೆಯಲು ಮನೆಯ ಕಂಬ, ಅಥವಾ ಮಜ್ಜಿಗೆಗೆಂದೇ ಸೆಟ್ಟಿರುವ ಕಂಬಕ್ಕೆ ಆಸರೆಯಾಗಿ ಕಟ್ಟಿಕೊಂಡು ಮಜ್ಜಿಗೆ ಕಡೆಯುವ ಕೆಲಸ ಮಾಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಸ್ಟೀಲಿನ ಮಂಥಿನಿಂದಲೋ, ಮಿಕ್ಸಿಯಲ್ಲೋ ಮನೆಗೆ ಬೇಕಾದ ಮಜ್ಜಿಗೆ ಮಾಡಿಕೊಳ್ಳುವರು. ಬೇಕರಿಯಲ್ಲಿ ಸಿದ್ದವಾದ ಮಜ್ಜುಗೆಯ ಪ್ಯಾಕೆಟ್‌ಗಳು ದೊರೆಯುವುದರಿಂದ ಅದನ್ನು ತಂದು ಬಳಸುವವರೇ ಹೆಚ್ಚಾಗಿದ್ದಾರೆ.

***ಕಾಯಿ ತುರಿಯುವ ಮಣೆ***



ಇದನ್ನು ಆಡು ಮಾತಿನಲ್ಲಿ ಇಳಿಗೆ ಮಣೆ, ಎಚ್ಚುವ ಮಣೆ ಎಂದು ಕರೆಯುವರು. ಆಲ, ಹಲಸು, ಮಾವು ಮುಂತಾದ ಮರದಿಂದ ಇದನ್ನು

[3] ವಕ್ತೃ: ಕೆಂಚಮ್ಮ. (2023 ಜುಲೈ 12). *ರೈತ ಮಹಿಳೆ.* ನಿಡ್ತ ಗ್ರಾಮ, ಸೋಮುವಾರಪೇಟೆ ತಾಲೂಕು, ಕೊಡಗು ಜಿಲ್ಲೆ.

ಮಾಡುವರು. ಇದು ಅನೇಕ ಕೆಲಸಕ್ಕೆ ಉಪಯುಕ್ತವಾಗಿದೆ. ತೆಂಗಿನಕಾಯಿ ತುರಿಯಲ್ಲಿ ಮಾಂಸ, ತರಕಾರಿ ಎಚ್ಚಲು, ಅಡಿಕೆ ಕಾಯಿ ಸುಲಿಯಲು ಬಳಸುವರು. ಇದರ ಹಿಂಭಾಗ ಹಲಗೆಯಂತಿದ್ದು, ಮುಂಭಾಗದಲ್ಲಿ ಚಪ್ಪಟೆಯಾದ ಗುಂಡಿಯಾಗಿದ್ದು ತುರಿದ, ಕುಯ್ದ ಪದಾರ್ಥಗಳೆಲ್ಲವು ಅದರೊಳಗೆ ಬೀಳುತ್ತದೆ. ಅದರ ಮುಂದುಗಡೆ, ತುರಿಯಲು, ಕುಯ್ಯಲು ಅನುಕೂಲವಾಗುವಂತೆ ಹರಿತವಾದ ಕಬ್ಬಿಣದ ಸಾಧನವನ್ನು ಜೋಡಿಸಿರುತ್ತಾರೆ.

***ಶಾವಿಗೆ ಬರಳು***

ತಳಭಾಗ ತೌಟಿಗೆಯಂತೆ ಚೌಕಾಕಾರವಾಗಿಯೂ ಒಳಭಾಗದಲ್ಲಿ ಬರಳು ಜಾಲರಿಯಂತೆ ಕಿಂಡಿ ಇರುತ್ತದೆ. ಮೇಲ್ಭಾಗದ ಬರಳಿಗೆ ಹಿಟ್ಟು ಹಾಕಿ ಕೊಂತನ ಕೋಲಿನಿಂದ ಒತ್ತಿದರೆ ಸುಲಭವಾಗಿ ಸುರುಳಿ ಸುರುಳಿಯಾಗಿ ಶಾವಿಗೆ ಹೊರಬರುತ್ತದೆ. ಶಾವಿಗೆ ಒತ್ತುವಾಗ ಅನುಭವ ಹಾಗೂ ದೈಹಿಕ ಶ್ರಮ ಅತ್ಯಗತ್ಯ ಹಿಂದೆ ಗ್ರಾಮಾಂತರ ಪ್ರದೇಶದಲ್ಲಿ ಗೌರಿ ಗಣೇಶ ಹಬ್ಬದ ಸಂದರ್ಭದಲ್ಲಿ ಹೊಸ ಅಳಿಯನಿಗೆ ಏರ್ಪಡಿಸುತ್ತಿದ್ದ ದೈಹಿಕ ಶ್ರಮದ ಕ್ರೀಡೆಗೆಳಲ್ಲಿ ಶಾವಿಗೆ ಒತ್ತುವ ಸ್ಪರ್ಧೆಯೂ ಒಂದಾಗಿತ್ತಂತೆ. ಇತ್ತೀಚಿಗೆ ಮರದ ಶಾವಿಗೆ ಒರಳಿಗೆ ಬದಲಾಗಿ ಸ್ಟೀಲ್ ಹಿತ್ತಾಳೆ ಮತ್ತಿತರ ಲೋಹದ ಒರಳುಗಳು ಚಾಲ್ತಿಯಲ್ಲಿವೆ.[4]



***ಬಟ್ಟಣಿಗೆ***

ಮುದ್ದೆ ಕಟ್ಟಲು ಬಳಸುವ ವೃತ್ತಾಕಾರದ ಸಾಧನ ಇದನ್ನು ಮೆದು ಮರದಿಂದ ಮುಂಭಾಗದಲ್ಲಿ ಗುಂಡಿಯಾಕಾರವಾಗಿದ್ದು ಹಿಂಭಾಗದಲ್ಲಿ ಹಿಡಿದುಕೊಳ್ಳಲು ಹಿಡಿ ಇರುತ್ತದೆ. ಮುದ್ದೆ ತೆಗೆಯುವಾಗ ಬಟ್ಟಣಿಗೆಯನ್ನು ನೀರಿನಿಂದ ತೇವ ಮಾಡಿಕೊಂಡು ಮುದ್ದೆ ಕಟ್ಟಿದರೆ ಮುದ್ದೆ ನುಣುಪಾಗಿ ಚಂಡಿನಂತೆ ಕಾಣುತ್ತದೆ. ಇದೇ ಸಾಧನವನ್ನು ಕಂಚಿನಿಂದಲೂ ಹಿತ್ತಾಳೆಯಿಂದಲೂ ಮಾಡಿರುವುದುಂಟು.

***ಹಿಟ್ಟಿನ ದೊಣ್ಣೆ***

ಇದನ್ನು ಮುದ್ದೆಗೋಲೆಂತಲೂ ಕರೆಯುತ್ತಾರೆ. ಸಾಮಾನ್ಯವಾಗಿ ಇದು ಎರಡರಿಂದ ಎರಡೂವರೆ ಅಡಿ ಉದ್ದದ ದಬ್ಬೆಯಾಕಾರದಲ್ಲಿರುತ್ತದೆ. ಇದನ್ನು ಹೆಚ್ಚಾಗಿ ಅಡಿಕೆ ಮರದ ದಬ್ಬೆಯಿಂದ ಮಾಡಲಾಗಿರುತ್ತದೆ. ಮದುವೆ ಮತ್ತಿತರ ಸಮಾರಂಭದಲ್ಲಿ ಏಕಕಾಲದಲ್ಲಿ ಎರಡು ಮೂರು ಕೋಲುಗಳಿಂದ ಮುದ್ದೆ ತಿರುವಲು ಹಿಡಿ ಗಾತ್ರದ ಮರದ ತುಂಡುಗಳನ್ನು ಬಳಸಲಾಗುತ್ತದೆ.



[4] ವಕ್ತೃ: ಸತ್ಯವತಿ. (2023, ಜುಲೈ 12). *ರೈತ ಮಹಿಳೆ.* ನಿಡ್ತ ಗ್ರಾಮ, ಸೋಮುವಾರಪೇಟೆ ತಾಲೂಕು, ಕೊಡಗು ಜಿಲ್ಲೆ.

***ತೌಟಿಗೆ***

ಇದನ್ನು ಪ್ರಾದೇಶಿಕವಾಗಿ ತವುಂಟಿಕೆ, ತವುಂಟಿಗೆ, ತೇವುಟ್ಗೆ, ತೇವಟಿಗೆ, ತವಟಿಗೆ ಮೊದಲಾದ ಹೆಸರುಗಳಿಂದಲೂ ಕರೆಯಲಾಗುತ್ತದೆ. ವೃತ್ತಾಕಾರದ ಹಲಗೆಗೆ ಮೂರು ಕಾಲುಗಳಿರುತ್ತವೆ. ಇದನ್ನು ಹಿರಿಯರು ಊಟದ ಮೇಜಾಗಿಯೂ ಮಂಗಳಕಾಯಿ ಹಾಗೂ ಶವದ ತಲೆದೆಸೆಯಲ್ಲಿ ಅಕ್ಕಿ ತಟ್ಟೆ ಹಾಗೂ ದೀಪವನ್ನು ಹಚ್ಚಿಡಲು ಬಳಸಲಾಗುತ್ತದೆ.

***ಮರದ ತೊಟ್ಟಿಲು***

ತೊಟ್ಟಿಲನ್ನು ಮರದಿಂದ ನಾನಾ ನಮೂನೆಗಳನ್ನು ಕಲಾತ್ಮಕವಾಗಿ ಮಾಡುತ್ತಿದ್ದರು. ತೊಟ್ಟಿಲಲ್ಲಿ ಮಗುವನ್ನು ತೂಗುವುದರಿಂದ ಹಾಡನ್ನು ಕೇಳುತ್ತಾ ನಿದ್ರೆಗೆ ಜಾರುವಂತ ಸಾಧನವೆಂದೇ ಕರೆಯಲಾಗಿದೆ. ತೊಟ್ಟಿಲನ್ನು ತವರು ಮನೆಯವರು ಮಗಳ ಚೊಚ್ಚಲು ಹೆರಿಗೆ ಸಮಯದಲ್ಲಿ ಉಡುಗೊರೆಯಾಗಿ ನೀಡುತ್ತಿದ್ದರು. ಆದರೆ ಇತ್ತೀಚೆಗೆ ಫೈಬರ್, ಕಬ್ಬಿಣದ ತೊಟ್ಟಿಲುಗಳು ಬಳಕೆಗೆ ಬಂದಿದ್ದು ಮರದ ತೊಟ್ಟಿಲುಗಳ ಇಂದು ಕಣ್ಮರೆಯಾಗಿವೆ.

***ಒನಕೆ***

ದವಸ ಧಾನ್ಯಗಳನ್ನು ಅದರಲ್ಲೂ ಪ್ರಧಾನವಾಗಿ ಭತ್ತವನ್ನು ಕುಟ್ಟುವ ಬಳಸುವ ಸಾಧನವಾಗಿದೆ. ಇದನ್ನು ಸಾಮಾನ್ಯವಾಗಿ ಕಗ್ಗಲಿ ಅಥವಾ ಕಕ್ಕೆ ಮರದಿಂದ ಮಾಡುವ ಒಂದು ಸಾಧನ ಆದರೆ ಪ್ರದೇಶಕ್ಕನುಗುಣವಾಗಿ ಬೇರೆ ಬೇರೆ ಜಾತಿಯ ಮರಗಳಿಂದಲೂ ಮಾಡುವರು. ಒನಕೆ ಒಂದು ಹಿಡಿ ಗಾತ್ರದ ನಾಲ್ಕು ನಾಲ್ಕುವರೆ ಅಡಿ ಉದ್ದ ಒಂದು ಮರದ ತುಂಡು. ಇದನ್ನು ಕೆತ್ತಿ, ಅತ್ತರಿ ಹೊಡೆದು ನುಗುಣಪಾಗಿಸಿ ಎರಡೂ ತುದಿಗೂ ಕಬ್ಬಿಣದ ಬಳೆಯನ್ನು ಕಟ್ಟಿಸಲಾಗುತ್ತದೆ. ಒಂದು ತುದಿ ಮುಖ್ಯವಾಗಿ ಕುಟ್ಟುವ ಕಡೆ ದುಂಡಗಿದ್ದು ಮತ್ತೊಂದು ತುದಿ ಸಪಾಟಾಗಿದ್ದು ಇದನ್ನು ಕುಟ್ಟಿದ ಭತ್ತದ ಅಕ್ಕಿಯನ್ನು ತಳಿಸಲು ಉಪಯೋಗಿಸಲಾಗುತ್ತಿತ್ತು. ಒನಕೆಯನ್ನು ಅನೇಕ ಶಾಸ್ತ್ರ ಸಂಪ್ರದಾಯಗಳಲ್ಲೂ ಬಳಸುತ್ತಿದ್ದರು.[5]



**ಕೃಷಿಗೆ ಸಂಬಂಧಿಸಿದ ಕಲ್ಲಿನ ಉಪಕರಣಗಳು**

ಇತಿಹಾಸಪೂರ್ವ ಕಾಲದಿಂದಲೂ ಮಾನವ ಕಲ್ಲಿನ ಉಪಕರಣಗಳನ್ನು ಬಳಸಿಕೊಂಡು ಬರುತ್ತಿರುವುದನ್ನು ಕಾಣಬಹುದು. ಕೃಷಿ ಹಾಗೂ ಗೃಹೋಪಯೋಗಿ ಉಪಕರಣಗಳಾಗಿ ಅನೇಕ ಕಲ್ಲಿನ ಸಲಕರಣೆಗಳನ್ನು ಉಪಯೋಗಿಸಕೊಳ್ಳಲಾಗುತ್ತಿದೆ.

[5] ವಕ್ತೃ: ಸತ್ಯವತಿ. (2023, ಜುಲೈ 11). *ರೈತ ಮಹಿಳೆ.* ನಿಡ್ತ ಗ್ರಾಮ, ಸೋಮುವಾರಪೇಟೆ ತಾಲೂಕು, ಕೊಡಗು ಜಿಲ್ಲೆ.

***ರಾಗಿಕಲ್ಲು***



ಒಂದೇ ಗಾತ್ರಕ್ಕೆ ವೃತ್ತಾಕಾರವಾಗಿ ನಯಗೊಳಿಸಿರುವ ಎರಡು ಪ್ರತ್ಯೇಕ ಕಲ್ಲುಗಳ ನಡುವೆ ಕಬ್ಬಿಣ ಅಥವಾ ಮರದ ಗೂಟದ ಸಹಾಯದಿಂದ ಒಂದನೊಂದನ್ನು ಜೋಡಿಸಿರಲಾಗಿರುತ್ತದೆ. ಮೇಲಿನ ಕಲ್ಲಿನ ಮಧ್ಯಭಾಗದಲ್ಲಿ ಯಜ್ಞದ ನಡುವೆ ಧಾನ್ಯಗಳನ್ನು ಹಾಕಲು ಅನುಕೂಲವಾಗುವಂತೆ ವೃತ್ತಾಕಾರದಲ್ಲಿ ಬಾಯಿಯನ್ನು ಕೊರೆಯಲಾಗಿರುತ್ತದೆ. ಕಲ್ಲನ್ನು ಹಿಡಿದು ಒಬ್ಬರು ಅಥವಾ ಇಬ್ಬರು ತಿರುಗಿಸಲು ಮೇಲಿನ ಕಲ್ಲಿಗೆ ಗೇಣುದ್ದದ ಗೂಟವನ್ನು ಬಿಗಿಯಾಗಿ ಒಡೆಯಲಾಗಿರುತ್ತದೆ. ರಾಗಿ ಕಲ್ಲುಗಳನ್ನು ಸಾಮಾನ್ಯವಾಗಿ ಮನೆಯ ಅಥವಾ ಒಪ್ಪಾರಿನ ಮೂಲೆಯಲ್ಲಿ ಶಾಶ್ವತವಾಗಿ ನೆಟ್ಟಿರಲಾಗುತ್ತದೆ. ಮತ್ತೆ ಕೆಲವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಅನುಕೂಲವಾಗುವಂತೆ ಹಾಗೆಯೇ ಇಟ್ಟುಕೊಂಡಿದ್ದು, ಬೇಕಾದ ಕಡೆಗೆ ಮಡಿ ಬಟ್ಟೆ ಮೇಲಿಟ್ಟುಕೊಂಡು ಧಾನ್ಯಗಳನ್ನು ಬೀಸಿಕೊಳ್ಳಲಾಗುತ್ತದೆ. ಬೀಸುವ ಹೆಂಗಸರ ಬಲಭಾಗಕ್ಕೆ ದವಸ ತುಂಬಿದ ಮೊರ ಅಥವಾ ಕುಕ್ಕೆಯನ್ನಿಟ್ಟುಕೊಂಡು ಒಂದೊಂದು ಹೋಳು ದವಸವನ್ನು ಹಾಕಿ ಬೀಸುವುದುಂಟು ಬೀಸುವಾಗ ಆಯಾಸ ಆಗದಿರಲೆಂದು ತಮಗಿಷ್ಟವಾದ ಪದಗಳನ್ನು ಸುಶ್ರಾವ್ಯವಾಗಿ ಹಾಡುವುದುಂಟು ಬೀಸುವುದುಂಟು. ಬೀಸುವ ಪದಗಳು ರಾಗಿ ಬೀಸುವ ಪದಗಳೆಂದು ಜಾನಪದ ಸಾಹಿತ್ಯದಲ್ಲಿ ಪ್ರತ್ಯೇಕವಾದ ಸ್ಥಾನ ಪಡೆದುಕೊಂಡಿವೆ. ಬೀಸುವ ಕಾರ್ಯ ಮುಗಿದ ಮೇಲೆ ಕಲ್ಲನ್ನು ದೇವರೆಂದು ನಂಬಿ ನಮಿಸುತ್ತಾರೆ. ರಾಗಿಕಲ್ಲಿಗೆ ಸಂಬಂಧಿಸಿದಂತೆ ಗಾದೆ, ಒಗಟು, ಸಾಹಿತ್ಯ ಹುಟ್ಟಿಕೊಂಡಿದೆ. ರಾಗಿ ಕಲ್ಲಿನಲ್ಲಿ 'ಬಡಗಲ್ಲು' ಎಂದು ಇದೆ. ಇದರಿಂದ ಕಾಳುಗಳನ್ನು ಬಡೆದುಕೊಂಡು ಬೇಳೆ ಮಾಡಲು, ಅಕ್ಕಿಯನ್ನು ರವೆ ಮಾಡುವುದು, ಸಕ್ಕರೆಯನ್ನು ನಯಗೊಳಿಸಲು, ರಂಗೋಲಿ ಪುಡಿ ಮಾಡಲು ಬಳಸುವರು.[6]

***ಒರಳು ಕಲ್ಲು***

ಗ್ರಾನೈಟ್ ಕಲ್ಲಿನಲ್ಲಿ ವೃತ್ತಾಕಾರವಾಗಿ ಅಥವಾ ಚೌಕಾಕಾರವಾಗಿ ಮಾಡಲಾಗಿದ್ದು, ನಡುಮಧ್ಯದಲ್ಲಿ ಒಂದಷ್ಟು ಆಳವಾಗಿ ಗುಂಡಿ ಮಾಡಿ ಒರಳುಕಲ್ಲನ್ನು ನಡುಮನೆಯಲ್ಲೋ ಪಡಸಾಲೆಯಲ್ಲಿಯೇ ಹೂಳುತ್ತಿದ್ದರು. ಆದರೆ ಕೆಲವರು ಖಾರ ಆಡಿಸಿಕೊಳ್ಳಲು ಅಡುಗೆ ಮನೆಯಲ್ಲಿ ಹೂಳುತ್ತಿದ್ದರು. ನಡುಮನೆಯಲ್ಲಿ ಒರಳು ಕಲ್ಲಿನಲ್ಲಿ ಖಾರ ಆಡಿಸಿಕೊಳ್ಳುವುದರ ಜೊತೆಯಲ್ಲಿ ಭತ್ತ ಮತ್ತಿತರ ದವಸಗಳ ಕುಟ್ಟಿಕೊಳ್ಳಲು ಬಳಸುತ್ತಿದ್ದರು. ಒರಳು ಕಲ್ಲನ್ನು ಹೂಳುವಾಗ ಗುಂಡಿ ತೆಗೆದು ಅದರ ತಳಭಾಗದಲ್ಲಿ ಸ್ವಲ್ಪ, ಚಿನ್ನ, ಬೆಳ್ಳಿ, ಹಾಲು ಬಿಟ್ಟು ಪೂಜೆ ಮಾಡಿ ಭಕ್ತಿ ಭಾವದಿಂದ ಹೂಳುತ್ತಿದ್ದರು. ಅನಂತರ ಅದರಲ್ಲಿ ರಾಗಿತೆನೆ, ಭತ್ತ, ನವಣೆ,



[6] ವಕ್ತೃ: ನವೀನ್ ಕುಮಾರ್.ಎನ್.ಎಸ್. (2023, ಜುಲೈ 13). *ರೈತ.* ನಿಡ್ತ ಗ್ರಾಮ, ಸೋಮುವಾರಪೇಟೆ ತಾಲೂಕು, ಕೊಡಗು ಜಿಲ್ಲೆ.

ಜೋಳ ಹಾಕಿ ಒನಕೆಯಿಂದ ಕುಟ್ಟಿ ಕಾಳನ್ನು ಬೇರ್ಪಡಿಸುತ್ತಿದ್ದರು, ಕಜ್ಜಾಯ ಮಾಡಲು ನೆನೆಸಿದ ಅಕ್ಕಿ, ಒಡಿಯಲು ಅವಲಕ್ಕಿ, ಚಟ್ನಿಪುಡಿ, ಸಾಂಬಾರು ಪುಡಿಯನ್ನು ಒರಳು ಕಲ್ಲಿನಿಂದ ಕುಟ್ಟಿಕೊಳ್ಳುತ್ತಿದ್ದರು.

***ಗುಂಡುಕಲ್ಲು***

ಇದನ್ನು ರುಬ್ಬುವ ಕಲ್ಲೆಂದು ಕರೆಯುವರು. ಒರಳು ಕಲ್ಲಿನೊಳಗೆ ಖಾರ, ಅಕ್ಕಿ, ಮತ್ತಿತರ ವಸ್ತುಗಳನ್ನು ಹಾಕಿ ಖಾರ ಆಡಿಸುವುದಕ್ಕೆ ಬಳಸುತ್ತಿದ್ದರು. ಇದು ಸುಮಾರು ಒಂದರಿಂದ ಒಂದೂವರೆ ಅಡಿ ಎತ್ತರಕ್ಕೆ ಇರುತ್ತದೆ. ಕೆಲವು ಗುಂಡು ಕಲ್ಲುಗಳನ್ನು ಮರದ ಗೂಟದ ಸಹಾಯದಿಂದ ತಿರುಗಿಸಿದರೆ ಮತ್ತೆ ಕೆಲವನ್ನು ಬೋಳಾದ ಗುಂಡು ಕಲ್ಲಿನಿಂದ ಆಡಿಸುವರು. ಗುಂಡುಕಲ್ಲನ್ನು ಮದುವೆ ಸಂದರ್ಭದಲ್ಲಿ ಹಸೆ ಹಚ್ಚುವಾಗ ಗಂಡು ಅಥವಾ ಹೆಣ್ಣಿನ ಹಸೆಮಣೆಯ ಮೇಲೆ ಅರಸಿನ ಬಟ್ಟೆ ಅಂಗುದಾರ ಕಟ್ಟಿ ಇಡುವುದು ರೂಢಿಯಲ್ಲಿದೆ.

***ಮಸೆಯೋಕಲ್ಲು***



ಕೊಡಲಿ, ಕುಡಗೋಲು, ಕೂಯಗತ್ತಿ, ಮಚ್ಚು, ಚೂರಿ, ಮತ್ತಿತರ ಆಯುಧಗಳನ್ನು ಹರಿತಗೊಳಿಸಲು ಮಸೆಯೋ ಕಲ್ಲನ್ನು ಬಳಸುತ್ತಾರೆ. ಸಾಮಾನ್ಯವಾಗಿ ಗ್ರಾಮ ದೇವತೆಯಾದ ಮಾರಿ ಗುಡಿಯ ಮುಂದೆ ಮಸೆಕಲ್ಲುಗಳನ್ನು ನೆಟ್ಟಿರುವುದನ್ನು ಇಂದಿಗೂ ಕಾಣಬಹುದು.

**ಕೃಷಿಗೆ ಸಂಬಂಧಿಸಿದ ಬಿದಿರಿನ ಉಪಕರಣಗಳು:**



ಹುಟ್ಟಿದ ಮಗುವನ್ನು ಮಲಗಿಸುವುದರಿಂದ ಹಿಡಿದು ಸತ್ತಾಗ ಕಟ್ಟುವ ಚಟ್ಟದವರೆಗೂ ಬಿದಿರಿನ ಬಳಕೆ ಹೆಚ್ಚಾಗಿದೆ. ಹಿಂದೆ ಮನೆಯನ್ನು ಕಟ್ಟಲು, ಗುಡಿಸಲನ್ನು ನಿರ್ಮಿಸಲು ಉಪಯೋಗಿಸುತ್ತಿದ್ದು. ಬಾಗಿಲಾಗಿ, ತಡಿಕೆಯಾಗಿ, ಬೇಲಿಯಾಗಿ ಮತ್ತಿತರ ಕಾರ್ಯಗಳಿಗೆ ಬಿದಿರು ಉಪಯುಕ್ತ, ನಿತ್ಯ ಉಪಯೋಗಿಸುವ ವಸ್ತುಗಳಾದ ಮೊರ, ಕುಕ್ಕೆ, ಮಂಕರಿ, ಪೂಜಾಬುಟ್ಟಿ, ಹೂವಿನಬುಟ್ಟಿ ಬಿದಿರಿನ ಚಾಪೆ, ಕೊಳಲು, ಸಿಂಬಿ ಬಿದಿರಿನ ಹಂಡೆ, ಮತ್ತಿತರ ಸಾಧನವನ್ನು ಬಳಸುತ್ತಾರೆ. ಬಿದಿರನ್ನು ಕುರಿತು ಜಾನಪದದಲ್ಲಿ ಗಾದೆ, ಒಗಟುಗಳ ರೂಪದ ಸಾಹಿತ್ಯವು ದೊರೆಯುವುದು ಇದರಲ್ಲಿ ಹೆಬ್ಬಿದಿರು, ಕಿರುಬಿದಿರು ಎಂಬ ವಿಧಗಳುಂಟು.

***ಮೊರ:*** ದವಸಧಾನ್ಯವನ್ನು ಶುಚಿಮಾಡಲು ಕೇರಲು, ಬನಿಯಲು, ತೂರಲು, ಅಣಚಲು, ಕೊಚ್ಚಲು ಮೊರವನ್ನು ಬಳಸುವರು. ಗೌರಿಹಬ್ಬ ಹಾಗೂ ಮದುವೆಯ ಶಾಸ್ತ್ರದಲ್ಲಿ ಮುತ್ತೈದೆ ಬಾಗಿನ ಅರ್ಪಿಸುವಾಗ, ಭಿಕ್ಷೆ ನೀಡುವಾಗ, ಸುಗ್ಗಿ ಸಮಯದಲ್ಲಿ ಆಳುಗಳಿಗೆ ಕೂಲಿ ಕೊಡುವಾಗ ಇಂತಿಷ್ಟು ಮೊರ ಭತ್ತ, ರಾಗಿ ಎಂದು ಅಳತೆ ಪ್ರಮಾಣದಲ್ಲಿ ಮೊರವನ್ನು ಬಳಸುತ್ತಿದ್ದರು.

***ಕುಕ್ಕೆ***

ಇದರಲ್ಲಿ ಹಲವಾರು ವಿಧಗಳಿಗೆ, ಬಿದಿರನ್ನು ತಂತಿಯ ಆಕಾರದಲ್ಲಿ ಸೀಳಿ ಮಧ್ಯ ಮಧ್ಯದಲ್ಲಿ ಬಿದಿರಿನ ದಬ್ಬೆಯನ್ನಿಟ್ಟು ದೊಡ್ಡ ಗಾತ್ರದ ಕುಕ್ಕೆಯನ್ನು 'ಯಡಿಗೆ' ಎಂದೂ ಅದೇ ಗಾತ್ರದಲ್ಲಿ ಬಿದಿರಿನ ದಬೆಯಲ್ಲಿ ಹೆಣೆದಿರುವುದನ್ನು 'ಪಂಜರ' ಎಂತಲೂ ಕರೆಯುತ್ತಾರೆ. ತಳಕ್ಕಿಂತಲೂ ಬಾಯಿ ಅಗಲವಾಗಿರುವುದನ್ನು 'ಮಂಕರಿ' ಎಂತಲೂ ಕೋಲಾಕಾರದಲ್ಲಿ ಲಂಬವಾಗಿರುವುದನ್ನು 'ಗೋಡು ಮಂಕರಿ' ಎಂದೂ ಕರೆಯುವರು. ಏಣಿ, ಬೀಸಣಿಗೆ ಹಾಗೂ ಮದುವೆಯಲ್ಲಿ ಬಳಸುವ ಸಲಕರಣೆಗಳನ್ನು ಬಿದಿರಿನಿಂದಲೇ ಸಿದ್ಧಪಡಿಸುತ್ತಿದ್ದರು. ಈಗ ಮಾರುಕಟ್ಟೆಯಲ್ಲಿ ಅನೇಕ ರೀತಿಯ ಗೃಹಾಲಂಕಾರಿ ವಸ್ತುಗಳು ಬಿದಿರಿನಿಂದ ಮಾಡುತ್ತಿದ್ದಾರೆ.[7]



**ಕೃಷಿ ಸಂಬಂಧಿಸಿದ ಕಬ್ಬಿಣದ ಉಪಕರಣಗಳು:**

'ಹಾರೆ'ಯನ್ನು ಭೂಮಿ ಅಗೆಯಲು, ಗುದ್ದಲಿಯನ್ನು ಅಗೆದ ಮಣ್ಣನ್ನು ತೆಗೆಯಲು, ತುಂಬಲು ಕಲಸಲು ಬಳಸುವರು, ತೆವರಿ ಗುದ್ದಲಿಯನ್ನು ಗದ್ದೆ ತೆವಡೆ ಹಾಕಲು ಬಳಸುತ್ತಾರೆ. ಕಳೆಕುಡ್ಲು ಪಿಕಾಸಿ ಇವುಗಳನ್ನು ಮುಳ್ಳುಗಿಡ ತೆಗೆಯಲು, ಸಣ್ಣ ಸಣ್ಣ ಗಿಡಗಂಟೆಗಳನ್ನು ಬೇರೆ ಸಹಿತ ತೆಗೆಯಲು ಬಳಸುವರು, ಕೈ ಬಾಚಿ ಕೊಡಲಿಯನ್ನು ಮರಗಿಡ ಕಡಿಯಲು, ಸೌದೆಯನ್ನು ಸೀಳಲು ಬಳಸುವರು. ಕುಡಲು ಅಥವಾ ಕೂಡಗೋಲನ್ನು ಸೊಪ್ಪುಸದೆಗಳನ್ನು ಕುಯ್ಯಲು, ಮಚ್ಚನ್ನು ಸೌದೆ ಕತ್ತರಿಸಲು ಉಪಯೋಗಿಸುವರು, ಚಾಕು, ಬಾಚಿ, ಉಳಿ, ಗರಗಸ, ಕೊಡಲಿ, ಕತ್ತಿ ಕತ್ತರಿಗಳನ್ನು, ಕುಯ್ಯಲು, ಕೊಚಲ್ಲು, ಹಚ್ಚಲು ಬಳಸಲಾಗುತ್ತದೆ. ಈ ಆಯುಧಗಳನ್ನು ತಿರುಗಾಡುವ ಸ್ಥಳಗಳಲ್ಲಿ ಇಡುವುದಾಗಲೀ, ಎಸೆಯುವುದಾಗಲೀ ಮಾಡದೆ ಪ್ರತ್ಯೇಕವಾದ ಸ್ಥಳಗಳಲ್ಲೇ ಇಡುವರು, ವರ್ಷಕ್ಕೊಮ್ಮೆ ಆಯುಧ ಪೂಜೆಯಂದು ಇವುಗಳಿಗೆ ಬಲಿ ನೀಡಿ ವಿಶೇಷ ಪೂಜೆ ಮಾಡಲಾಗುತ್ತದೆ.[8]

***ಪಿಕಾಕ್ಸ್ ಅಥವಾ ಪಿಕ್ ಹ್ಯಾಂಡಲ್:***

ಲಂಬವಾಗಿ ಜೋಡಿಸಲಾದ ಗಟ್ಟಿಯಾದ ತಲೆಯನ್ನು ಹೊಂದಿರುವ ಕೈ ಸಾಧನವಾಗಿದೆ. ಅವುಗಳನ್ನು ಭೂದೃಶ್ಯದ ಸಾಧನಗಳಾಗಿ, ಗಟ್ಟಿಯಾದ ಮೇಲ್ಮೈಗಳನ್ನು ಒಡೆಯಲು ಮತ್ತು ಕೃಷಿ ಉಪಕರಣಗಳಾಗಿ ಬಳಸಲಾಗುತ್ತದೆ. ಇದು ಲೋಹದಿಂದ ಮಾಡಿದ ಹ್ಯಾಂಡಲ್ ಮತ್ತು ತಲೆಯನ್ನು ಒಳಗೊಂಡಿರುತ್ತದೆ, ಅದು ಮೊನಚಾದ ಮತ್ತು ಮೊಂಡಾದ ತುದಿಯನ್ನು ಹೊಂದಿರುತ್ತದೆ. ಮೊನಚಾದ ತುದಿಯು ಗಟ್ಟಿಯಾದ ಮೇಲ್ಮೈಗಳನ್ನು ಒಡೆಯುತ್ತದೆ, ಆದರೆ ಮೊಂಡಾದ ತುದಿಯನ್ನು ವಸ್ತುಗಳನ್ನು ಇಣುಕಲು ಬಳಸಬಹುದು. ಒಂದು ಗುದ್ದಲಿಯು ಸಲಿಕೆಯಿಂದ ಸಾಧ್ಯವಾಗದ ಮಣ್ಣನ್ನು ಒಡೆಯಬಹುದು. ಒಣ, ಗಟ್ಟಿಯಾದ ಜೇಡಿಮಣ್ಣು ಅಥವಾ ಕಲ್ಲಿನ ಮಣ್ಣನ್ನು ಕೊಡಲಿಯ ಚೂಪಾದ ತುದಿಯನ್ನು ಬಳಸಿ ಒಡೆಯಬಹುದು.

---

[7] ವಕ್ತೃ: ಶಿವಪ್ಪ. (2023, ಜುಲೈ 11). *ರೈತ.* ನಿಡ್ತ ಗ್ರಾಮ, ಸೋಮುವಾರಪೇಟೆ ತಾಲೂಕು, ಕೊಡಗು ಜಿಲ್ಲೆ.

[8] https://www.farmerscion.com/agricultural-implements/agricultural-implements-its-types-uses-benifits/

***ಕೊಡಲಿ***

ಈ ರೀತಿಯ ಕೃಷಿ ಉಪಕರಣಗಳು ಬಹುಮುಖವಾಗಿದ್ದು, ರೈತರು ಭೂಮಿಯನ್ನು ಸ್ವಚ್ಛಗೊಳಿಸಲು ಮತ್ತು ಅನಗತ್ಯ ಸಸ್ಯಗಳನ್ನು ತೆಗೆದುಹಾಕಲು ಬಳಸಬಹುದು. ಇದು ಸುಲಭವಾಗಿ ಸಣ್ಣ ಮರಗಳು, ಪೊದೆಗಳು ಅಥವಾ ದಟ್ಟವಾದ ಗಿಡಗಂಟಿಗಳನ್ನು ಕತ್ತರಿಸಬಹುದು. ತೋಟಗಳ□ □ □ □ಮರಗಳನ್ನು ಟ್ರಿಮ್ ಮಾಡುವುದು ಒಳಗೊಂಡಿರುತ್ತದೆ. ಈ ಕೆಲಸಕ್ಕೆ ಕೊಡಲಿಯನ್ನು ಬಳಸಬಹುದು.[9]

**ಕೃಷಿ ಉಪಕರಣಗಳ ಪ್ರಯೋಜನಗಳು**

ಕೃಷಿ ಉಪಕರಣಗಳು ಈ ಕೆಳಗಿನ ವಿಧಾನಗಳಲ್ಲಿ ಅನುಕೂಲಕರವಾಗಿವೆ. ಮಾನವ ಶ್ರಮವು ಪ್ರಮಾಣದ ಆದೇಶಗಳಿಂದ ಕಡಿಮೆಯಾಗಿದೆ, ಉಪಕರಣಗಳನ್ನು ಬಳಸಿದಾಗ, ಕಡಿಮೆ ಕಾರ್ಮಿಕರ ಅಗತ್ಯವಿರುತ್ತದೆ., ಅವರು ಹೆಚ್ಚು ಪರಿಣಾಮಕಾರಿ ಕೃಷಿ ಉತ್ಪಾದನೆಗೆ ಕೊಡುಗೆ ನೀಡುತ್ತಾರೆ, ಇದು ಕಾರ್ಮಿಕರ ವೆಚ್ಚವನ್ನು ಕಡಿಮೆ ಮಾಡುತ್ತದೆ, ಕೃಷಿ ಉಪಕರಣಗಳು ಒಂದು ಬಾರಿ ಖರೀದಿಯಾಗಿದೆ, ಇದು ನಿಮಗೆ ಸಮಯ ಮತ್ತು ಹಣ ಎರಡನ್ನೂ ಉಳಿಸುತ್ತದೆ. ಈ ಸಾಧನಗಳನ್ನು ತಯಾರಿಸುವ ಕೃಷಿ ಉದ್ಯಮಗಳ ವಿಸ್ತರಣೆಯನ್ನು ಹೆಚ್ಚಿಸುತ್ತದೆ.

**ಉಪಸಂಹಾರ**

ಪ್ರಕೃತಿ ಪ್ರಿಯರಿಗೆ ನಿಡ್ತ ಪ್ರದೇಶವು ಶಾಂತ, ಸಮಾಧಾನಕರ ವಾತಾವರಣವನ್ನು ನೀಡುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಪಾರಂಪರಿಕ ಕೃಷಿ ಪದ್ಧತಿಯು ಕ್ಷೀಣವಾಗುತ್ತಿದೆ. ನೇಗಿಲನ್ನು ತಮ್ಮ ಸುತ್ತಮುತ್ತಲ ಕಾಡಿನಲ್ಲಿ ದೊರಕುವ ಗಟ್ಟಿ ಮರವನ್ನು ಕಡಿದು ತಂದು ನೇಗಿಲನ್ನು ಮಾಡುತ್ತಿದ್ದರು. ನೇಗಿಲ ತಯಾರಿಸುವುದರ ಹಿಂದೆ ಹಲವಾರು ಜನರ ಶ್ರಮ ಬೇಕಾಗಿತ್ತು. ಮರ ಕಡಿಯುವವನು ಒಬ್ಬ, ಅದನ್ನು ಕೆತ್ತಿ ರೂಪ ಕೊಡುವವನು ಬೇರೊಬ್ಬ. ನೇಗಿಲನ್ನು ಉಪಯೋಗ ಮಾಡುವುದು ಬೇರೊಬ್ಬನಾಗಿರುತ್ತಾನೆ. ಆದರೆ ಆಧುನಿಕ ಯಂತ್ರೋಪಕರಣಗಳು ಈ ಪಾರಂಪರಿಕ ಕೃಷಿ ಉಪಕರಣಗಳ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡೇ ಹುಟ್ಟಿಕೊಂಡಿದೆ. ಆಧುನಿಕ ಯಂತ್ರಗಳನ್ನು ಬಳಕೆ ಮಾಡಿಕೊಳ್ಳುವುದರಿಂದ ಕೃಷಿಯ ಪಾರಂಪರಿಕತೆಯನ್ನು ಹಾಳು ಮಾಡಿವೆ. ಕೃಷಿಕರಿಗೆ ಸಿಗುವಂತಹ ಅನ್ನವನ್ನು ಕಸಿದುಕೊಳ್ಳುತ್ತಿವೆ. ಪಾರಂಪರಿಕವಾದ ನೇಗಿಲಿನಿಂದ ಅಚ್ಚುಕಟ್ಟಾಗಿರುತ್ತದೆ. ಆಧುನಿಕ ಯಂತ್ರೋಪಕರಣಗಳಿಂದ ಪಾರಂಪರಿಕವಾದಂತಹ ಕುಲ ಕಸುಬುಗಳು ಮೂಲೆ ಗುಂಪಾಗಿವೆ. ಆಧುನಿಕ ಯಂತ್ರಗಳಿಂದಾಗಿ ಪಾರಂಪರಿಕವಾದ ಕೃಷಿಯ ವಿಧಾನ ಕಡಿಮೆಯಾಗುತ್ತಾ ಬಂದು ಸುಧಾರಿತ ಬೇಸಾಯದ ಕಡೆಗೆ ರೈತರು ಒಲವು ತೋರಿಸುತ್ತಿದ್ದಾರೆ. ಈ ಆಧುನಿಕ ಯಂತ್ರಗಳನ್ನು ಬಳಸಿಕೊಂಡು ಅವು ನಿರುದ್ಯೋಗ ಸೃಷ್ಟಿಸಬಾರದು, ಅಲ್ಲದೆ ರೈತ ಹಾಗೂ ಭೂಮಿಗೂ ಅವಿನಾಭಾವ ಸಂಬಂಧ ಕಲ್ಪಿಸುವಂತಿದ್ದು ಪಾರಂಪರಿಕವಾದ ಕೃಷಿ ಪದ್ಧತಿಗೆ ಹಾನಿಯುಂಟು ಮಾಡಬಾರದು ಎಂಬುವುದು ಈ ಲೇಖನದ ಆಶಯವಾಗಿದೆ.

---

[9] https://tractorgyan.com/tractor-industry-news-blogs/793/top-12-agricultural-tools-for-farming-in-india

**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ. (2008). *ಕನ್ನಡ ವಿಷಯ ವಿಶ್ವಕೋಶ.* ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಆನಂದತೀರ್ಥ ಪ್ಯಾಟಿ. (2008). *ನಿರ್ಮಾಣ ಕಲೆ.* ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಚಿನ್ನಪ್ಪ ಗೌಡ. (2016). *ಜಾನಪದ ಜಗುಲಿ. 3(2).* ನೇಕಾರ ಪ್ರಕಾಶನ, ಶಿವಮೊಗ್ಗ.
- ಗಾಣದಾಳು ಕಂಠ. (2008). *ಕೃಷಿ ಉಪಕರಣ.* ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಕುಮುದಿನಿ,ಸಿ.ಕೆ. (1982). *ಪ್ರಾಚೀನ ಭಾರತದಲ್ಲಿ ಬೇಸಾಯ.* ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.
- ಮುರಿಗಪ್ಪ, ಎ. (2011). *ದಕ್ಷಿಣ ಭಾರತೀಯ ಜಾನಪದ ಕೋಶ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ರಮೇಶ್,ಸ.ಚಿ. (20100. *ದಕ್ಷಿಣ ಕರ್ನಾಟಕದ ಜನಪದ ಆಚರಣೆಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.